26-09-2026

ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು,

ಶೇಷಾದ್ರಿ ಅಯ್ಯರ್ ರಸ್ತೆ ಮೈಸೂರು.

ನಮ್ಮ ಕಾಲೇಜಿನ ಹಿಂದಿ ವಿಭಾಗದ ವತಿಯಿಂದ

ವಿದ್ಯಾರ್ಥಿಗಳಿಗಾಗಿ ದಿನಾಂಕ 26. 9. 2016 ರಂದು ಒಂದು ದಿನದ ಶೈಕ್ಷಣಿಕ ಪ್ರವಾಸವನ್ನು ಆಯೋಜಿಸಲಾಗಿತ್ತು ಈ ಪ್ರವಾಸದ ಉದ್ದೇಶ ವಿದ್ಯಾರ್ಥಿಗಳಿಗೆ ಐತಿಹಾಸಿಕ ಸಾಂಸ್ಕೃತಿಕ ಹಾಗೂ ಪ್ರವಾಸೋದ್ಯಮದ ಸ್ಥಳಗಳ ಕುರಿತು ಪ್ರಾಯೋಗಿಕ ಜ್ಞಾನವನ್ನು ನೀಡುವುದಾಗಿತ್ತು ಬೆಳಿಗ್ಗೆ 5:30 ವೇಳೆಗೆ ಕಾಲೇಜಿನಿಂದ ಪ್ರವಾಸ ವನ್ನು ಪ್ರಾರಂಭಿಸಲಾಯಿತು. ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಾದ ಶಶಿಕಲಾ ಎಚ್. ಬಿ. ಯಮುನಾ ಎಂ. ಜೆ. ಉತ್ಸಾಹದಿಂದ ಪ್ರವಾಸದಲ್ಲಿ ಭಾಗವಹಿಸಿದರು ಮೊದಲಿಗೆ ಬೈಲುಕುಪ್ಪೆ ಗೋಲ್ಡನ್ ಟೆಂಪಲ್ ಗೆ ಭೇಟಿ ನೀಡಲಾಯಿತು. ಅಲ್ಲಿಯ ಸ್ಥಳ ಪರಿಚಯ ಮತ್ತು ದೇವಾಲಯದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಲಾಯಿತು ನಂತರ ನಿಸರ್ಗಧಾಮಕ್ಕೆ ಭೇಟಿ ನೀಡಿ ಪ್ರಕೃತಿಯ ಸೌಂದರ್ಯವನ್ನು ವಿದ್ಯಾರ್ಥಿಗಳೆಲ್ಲರೂ ಕಣ್ತುಂಬಿಕೊಂಡರು. ಹಾಗೆ ಮುಂದುವರೆದು ಚಕ್ಲಿ ಹೊಳೆ, ದುಬಾರಿ ಫಾರೆಸ್ಟ್, ಹಾರಂಗಿ ಡ್ಯಾಮ್, ಹ್ಯಾಂಗಿಂಗ್ ಬ್ರಿಡ್ಜ್ ಎಲ್ಲವನ್ನು ವೀಕ್ಷಿಸಲಾಯಿತು. ನಂತರ ಎಲ್ಲರೂ ಒಟ್ಟಿಗೆ ಮಧ್ಯಾಹ್ನ ಊಟವನ್ನು ಮಾಡಿದೆವು. ಮುಂದೆ ಹಬ್ಬಿ ಫಾಲ್ಸ್. ರಾಜ ಸೀಟ್ ವೀಕ್ಷಿಸಿ ಮೈಸೂರಿನ ಕಡೆ ಹೊರಟೆವು ಎಲ್ಲರೂ ಪ್ರವಾಸದ ಸುಂದರ ಕ್ಷಣಗಳನ್ನು ಆನಂದಿಸಿದರು .ಸಂಜೆಯ ವೇಳೆ ಪ್ರವಾಸವನ್ನು ಮುಕ್ತಾಯಗೊಳಿಸಿ ರಾತ್ರಿ 10 ಗಂಟೆಗೆ ಕಾಲೇಜಿಗೆ ಮರಳಲಾಯಿತು. ಎಲ್ಲಾ ವಿದ್ಯಾರ್ಥಿಗಳನ್ನು ಅವರ ಪೋಷಕರ ಜೊತೆ ಕಳಿಸಿಕೊಟ್ಟು ನಾವು ಮನೆಗೆ ಮರಳಿದೆವು, ಈ ಒಂದು ದಿನದ ಪ್ರವಾಸವು ವಿದ್ಯಾರ್ಥಿಗಳಿಗೆ ಸಂತೋಷವನ್ನು ನೀಡುವ ಅರ್ಥಪೂರ್ಣ ಕಾರ್ಯಕ್ರಮವಾಗಿತ್ತು.


COORG


ಕಾವೇರಿ ನಿಸರ್ಗಧಾಮ

